International Journal of Kannada Research 2024; 10(2): 97-103

International Journal of Kannada Research
www.kannadajournal.com

ISSN: 2454–5813
IJKR 2024; 10(2): 97-103
© 2024 IJKR
www.kannadajournal.com
Received: 20-01-2024
Accepted: 24-02-2024

**ಮಹದೇವಮ್ಮ. ಬಿ**
ಕನ್ನಡ ಪ್ರಾಧ್ಯಾಪಕಿ, ನ್ಯೂ ಬಾಲ್ಡ್ ವಿನ್ ಪಿ. ಯು ಮತ್ತು ಡಿಗ್ರಿ ಕಾಲೇಜು, ಸುಂಕದಕಟ್ಟೆ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಮಹದೇವಮ್ಮ. ಬಿ**
ಕನ್ನಡ ಪ್ರಾಧ್ಯಾಪಕಿ, ನ್ಯೂ ಬಾಲ್ಡ್ ವಿನ್ ಪಿ. ಯು ಮತ್ತು ಡಿಗ್ರಿ ಕಾಲೇಜು, ಸುಂಕದಕಟ್ಟೆ, ಬೆಂಗಳೂರು, ಕರ್ನಾಟಕ, ಭಾರತ

# ಡಾ.ಕೆ.ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು

**ಮಹದೇವಮ್ಮ. ಬಿ**

**ಪೀಠಿಕೆ**

'ಶಿಕ್ಷಣ ಉನ್ನತವಾಗಿ ಮಾಡದಿದ್ದರೂ, ಯಾವುದೇ
"ವ"ರ್ಗಗಳ ಭೇದವಿಲ್ಲದೆ, ಪದಗಳ
"ರಾ"ಯಭಾರವನ್ನು ಕಥೆಯ ಮೂಲಕ ಎಲ್ಲರ
"ಮ"ನಮುಟ್ಟುವಂತೆ ರಚಿಸಿ, ಕನ್ನಡಕ್ಕೆ
"ಕಾ"ಣಿಕೆಯಾಗಿ ಕಾದಂಬರಿಗಳನ್ನು "ರಂಗು ರಂಗಾಗಿ ಬರೆದು, ತನು ಮನ
"ತ"ಲ್ಲಣಿಸುವಂತೆ ಮಾಡಿರುವವರು ನಮ್ಮ ನೆಚ್ಚಿನ ಕೋಟ ಕಾರಂತರು".

ಪೀಠಿಕೆ:

"ಕಡಲ ತೀರದ ಭಾರ್ಗವ", "ನಡೆದಾಡುವ ವಿಶ್ವಕೋಶ" ಎಂದೇ ಪ್ರಸಿದ್ಧರಾಗಿದ್ದ, ಕನ್ನಡ ಸಾಹಿತ್ಯ ಸಂಸ್ಕೃತಿಯ ವಕ್ತಾರ, ನಮ್ಮ ಜ್ಞಾನಪೀಠ ಪುರಸ್ಕೃತ "ಕೋಟ ಶಿವರಾಮ ಕಾರಂತರು".
ಡಾ. ಕೆ. ಶಿವರಾಮ ಕಾರಂತರು 20ನೇಯ ಶತಮಾನ ಕಂಡ ಬಹುಮುಖ ವ್ಯಕ್ತಿತ್ವ, ಕಾದಂಬರಿಕಾರ, ಯಕ್ಷಗಾನ ಪ್ರಯೋಗ ಶೀಲಾ, ಪರಿಸರ ತಜ್ಞ, ನಾಟಕಕಾರ, ವೈಜ್ಞಾನಿಕ ಬರಹಗಾರ, ಕವಿ, ಅನುವಾದಕರು ಹೌದು. "ಆಡು ಮುಟ್ಟದ ಸೊಪ್ಪಿಲ್ಲ ಕಾರಂತರು ಬರೆದ ಸಾಹಿತ್ಯ ಪ್ರಕಾರವೇ ಇಲ್ಲ" ಎಂದು ಹೇಳಬಹುದು. ರಾಮಚಂದ್ರ ಗುಹಾ ರವರು ಕಾರಂತರನ್ನು "ಆಧುನಿಕ ಭಾರತದ ರವೀಂದ್ರನಾಥ ಟ್ಯಾಗೋರ್" ಎಂದು ಕರೆದಿದ್ದಾರೆ.
ಕಾರಂತರಿಗೆ "ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ, "ಮೂಕಜ್ಜಿಯ ಕನಸುಗಳು" ಎಂಬ ಕಾದಂಬರಿಯನ್ನು ಆಯ್ಕೆ ಮಾಡಿಕೊಂಡಿರುವುದು ನನ್ನ ಹೆಮ್ಮೆ. ಜ್ಞಾನಪೀಠ ಪ್ರಶಸ್ತಿ ಪಡೆದ ಈ ಪುಸ್ತಕ ಕೇವಲ 272 ಪುಟಗಳನ್ನೊಳಗೊಂಡಿದ್ದರೂ, ಬರವಣಿಗೆಯ ಗುಣಮಟ್ಟ ಮತ್ತು ಕಾದಂಬರಿಯ ಕಥಾ ವಸ್ತು ಮಹಾಕಾವ್ಯದಂತಿದೆ. ಕಾದಂಬರಿಯು ತುಂಬಾ ಆಳವಾದ ಮತ್ತು ಚಿಂತನೆಗೆ ಪ್ರಚೋದಕವಾಗಿದೆ. ಇದು ದೇವರು, ಸಂಸ್ಕೃತಿ, ನಂಬಿಕೆ, ಪವಿತ್ರ ಗ್ರಂಥಗಳು, ಭಗವದ್ಗೀತೆ, ಸಾವು, ಪುನರ್ಜನ್ಮ, ವಿಕಾಸ, ಆಚಾರ- ವಿಚಾರಗಳನ್ನು ಅನ್ವಯಿಸುತ್ತದೆ.

**ಕಾರಂತರ ಕುರಿತು ಒಂದು ನೋಟ**

ಶಿವರಾಮಕಾರಂತರು ಅಕ್ಟೋಬರ್, 10, 1902 ರಂದು ಕರ್ನಾಟಕದ, ಉಡುಪಿ ಜಿಲ್ಲೆಯ, ಕುಂದಾಪುರ, ಬಳಿಯ ಕೋಟದಲ್ಲಿ ಕನ್ನಡ ಮಾತನಾಡುವ ಸ್ಮಾರ್ತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಶೇಷ ಕಾರಂತರು ಮತ್ತು ಲಕ್ಷ್ಮಮ್ಮ ಅವರ ಐದನೇ ಮಗು ಕಾರಂತರು. ಇವರು ಕುಂದಾಪುರ ಮತ್ತು ಮಂಗಳೂರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದರು. ಕಾರಂತರು ಗಾಂಧಿಯವರ ತತ್ವಗಳಿಂದ ಪ್ರಭಾವಿತರಾಗಿದ್ದರು. ಮತ್ತು ಅವರು ಕಾಲೇಜಿನಲ್ಲಿದ್ದಾಗ "ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ" ಭಾಗವಹಿಸಿದರು. ಅಸಹಕಾರ ಚಳುವಳಿಯಲ್ಲಿನ ಅವರ ಭಾಗವಹಿಸಕೆಯು, ಫೆಬ್ರವರಿ 1922 ರಲ್ಲಿ ಕಾಲೇಜ್ ಶಿಕ್ಷಣವನ್ನು ಪೂರ್ಣಗೊಳಿಸಲು ಅವರಿಗೆ ಅವಕಾಶ ನೀಡಲಿಲ್ಲ. ಅವರು 1927ರವರೆಗೆ ಐದು ವರ್ಷಗಳ ಕಾಲ "ಭಾರತೀಯ ರಾಷ್ಟ್ರೀಯ ಕಾಂಗ್ರೆಸ್" ನಾಯಕ "ಕಾಂಗ್ರೆಸ್ ಸದಾಶಿವರಾಯರ" ನೇತೃತ್ವದಲ್ಲಿ ಕರ್ನಾಟಕದಲ್ಲಿ "ಖಾದಿ ಮತ್ತು ಸ್ವದೇಶಿ" ಪ್ರಚಾರ ನಡೆಸಿದರು. ಆ ಹೊತ್ತಿಗೆ ಕಾರಂತರು ಈಗಾಗಲೇ "ಕಾಲ್ಪನಿಕ ಕಾದಂಬರಿಗಳು ಮತ್ತು ನಾಟಕಗಳನ್ನ ಬರೆದಿದ್ದರು.

ಕಾರಂತರ ಮೊದಲ ಕಾದಂಬರಿ "ವಿಚಿತ್ರ ಕೂಟ". "ನಿರ್ಭಾಗ್ಯ ಜನ್ಮ", "ಸೋಲಿಯ ಸಂಸಾರ" ನಂತರದ ಕೃತಿಗಳು, ಸಮಕಾಲಿನ ಭಾರತದ ಮೇಲಿನ ವಿಡಂಬನೆಯಾದ "ದೇವದೂತರು" ಎಂಬ ಅವರ ದೊಡ್ಡ ಕೃತಿಯನ್ನು 1928 ರಲ್ಲಿ ಪ್ರಕಟಿಸಲಾಯಿತು. ಕಾರಂತರು ಕರ್ನಾಟಕದ ಕಲೆ ಮತ್ತು ಸಂಸ್ಕೃತಿಗೆ ಗಮನಾರ್ಹ ಕೊಡುಗೆ ನೀಡಿದ ಭೌತಿಕ ಮತ್ತು ಪರಿಸರವಾದಿ. ಅವರು ಕನ್ನಡ ಭಾಷೆಯ ಅತ್ಯಂತ ಪ್ರಭಾವಶಾಲಿ ಕಾದಂಬರಿಕಾರರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. ಅವರ ಕಾದಂಬರಿಗಳಾದ "ಮರಳಿ ಮಣ್ಣಿಗೆ", "ಬೆಟ್ಟದ ಜೀವ", "ಅಳಿದ ಮೇಲೆ", "ಮೂಕಜ್ಜಿಯ ಕನಸುಗಳು", "ಮೈಮನಗಳ ಸುಳಿಯಲ್ಲಿ", "ಅದೇ ಊರು ಅದೇ ಮರ", "ಶನೇಶ್ವರನ ನೆರಳಿನಲ್ಲಿ", "ಸ್ವಪ್ನದಹೊಳೆ", "ಕುಡಿಯರ ಕೂಸು", "ಚೋಮನಕ್ ಸಮಾಧಿ", ವಿಮರ್ಶಾತ್ಮಕ ಮತ್ತು ವ್ಯಾಪಕವಾದ ವಾಚನಗೋಷ್ಠಿಯನ್ನು ಪಡೆದಿದೆ.

ಕಾರಂತರು 1930 ಮತ್ತು 1940 ರ ದಶಕಗಳಲ್ಲಿ ಕೆಲವು ವರ್ಷಗಳ ಕಾಲ ಮುದ್ರಣ ತಂತ್ರದ ಪ್ರಯೋಗಗಳಲ್ಲಿ ತೊಡಗಿಸಿಕೊಂಡರು. ಮತ್ತು ತಮ್ಮದೇ ಆದ ಕಾದಂಬರಿಗಳನ್ನು ಮುದ್ರಿಸಿದರು. ಅವರು ವರ್ಣ ಚಿತ್ರಕಾರರು ಆಗಿದ್ದರು.

ಮತ್ತು "ಪರಮಾಣು ಶಕ್ತಿಯ ಸಮಸ್ಯೆ" ಮತ್ತು ಪರಿಸರದ ಮೇಲೆ ಅದರ ಪ್ರಭಾವದ ಬಗ್ಗೆ ಆಳವಾದ ಕಾಳಜಿಯನ್ನು ಹೊಂದಿದ್ದರು.

**ಕಾರಂತರಿಗೆ ಸಂದ ರಾಷ್ಟ್ರೀಯ ಗೌರವಗಳು**

- 2003 ರ "ಭಾರತದ ಅಂಚೆ ಚೀಟಿಯಲ್ಲಿ ಕಾರಂತರ ಭಾವಚಿತ್ರ"ವನ್ನು ನಾವು ಕಾಣಬಹುದು.
  'ಜ್ಞಾನಪೀಠ ಪ್ರಶಸ್ತಿ" 1978,
- "ಸಾಹಿತ್ಯ ಅಕಾಡೆಮಿ ಫೆಲೋಶಿಪ್" 1985,
- "ಸಂಗೀತ ನಾಟಕ ಅಕಾಡೆಮಿ ಫಲೋಶಿಪ್" 1973,
- "ಪದ್ಮಭೂಷಣ" 1968,
- "ಸಾಹಿತ್ಯ ಅಕಾಡೆಮಿ ಪ್ರಶಸ್ತಿ" 1959,
- "ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ",
- "ರಾಜ್ಯೋತ್ಸವ ಪ್ರಶಸ್ತಿ" 1986,
- "ಸಂಗೀತ ನಾಟಕ ಪ್ರಶಸ್ತಿ"
- "ಪಂಪ ಪ್ರಶಸ್ತಿ" 1989,
- "ಸ್ವೀಡಿಷ್ ಅಕಾಡೆಮಿ ಪ್ರಶಸ್ತಿ",
- 'ತುಳಸಿ ಸಮ್ಮಾನ್- 1990,
- 'ದಾದಾಬಾಯಿ ನವರೋಜಿ ಪ್ರಶಸ್ತಿ" 1990,
- "ಮೈಸೂರು ವಿಶ್ವವಿದ್ಯಾಲಯ", "ಮೀರತ್ ವಿಶ್ವವಿದ್ಯಾಲಯ", "ಕರ್ನಾಟಕ ವಿಶ್ವವಿದ್ಯಾಲಯ" ಮತ್ತು ಇತರರಿಂದ
- "ಗೌರವ ಡಾಕ್ಟರೇಟ್ಗಳು" ಸಂದಿವೆ.
- 'ಅತ್ಯುತ್ತಮ ಕಥೆಗಾರ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ-ಚೋಮನದಡಿ" 1975,

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ -ವಿಶೇಷ ಉಲ್ಲೇಖ ಬೆಟ್ಟದ ಜೀವ"- 2010,

ಈ ಎಲ್ಲಾ ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

"ಹುಚ್ಚು ಮನಸ್ಸಿನ ಹತ್ತು ಮುಖಗಳು" (ಇಂಗ್ಲಿಷ್ ಅನುವಾದ- "ಟೆನ್ ಫೇಸಸ್ ಆಫ್ ಎ ಕ್ರೇಜಿ ಮೈಂಡ್"- ಎಚ್ ವೈ ಶಾರದಾ ಪ್ರಸಾದ್) ಎಂಬ ಆತ್ಮ ಚರಿತ್ರೆಯನ್ನು ಬರೆದಿದ್ದಾರೆ.

ನಮ್ಮ ಕಾರಂತರು ಪ್ರವಾಸ ಕಥನಗಳನ್ನು ರಚಿಸಿದ್ದಾರೆ, "ಅರವಿಂದ ಬರಮಕ್ಕೆ", "ಅರಸಿಕಲ್ಲು", "ಅಪೂರ್ವ ಪಶ್ಚಿಮ",

"ಪಾತಾಳಕ್ಕೆ ಪಯಣ". ಜೊತೆಗೆ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ-"ಪಂಜೆ ಮಂಗೇಶರಾಯರು", "ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ", "ಶ್ರೀ ರಾಮಕೃಷ್ಣರ ಜೀವನ ಚರಿತ್ರೆ"ಯನ್ನು ಬರೆದಿದ್ದಾರೆ.

**ಕಾರಂತರ ಚಿಂತನೆಗಳು**

ಅವರು ದೇವರನ್ನು ನಂಬುವುದಿಲ್ಲ, ಏಕೆಂದರೆ ನೋಡಿಲ್ಲ. ಯಾವುದು ಗೊತ್ತಿಲ್ಲವೋ ಅದನ್ನ ನಂಬುವುದಿಲ್ಲ. ಕಾರಂತರಿಗೆ ರಾಮ ಎಂದರೆ, ರಾಜ ರವಿವರ್ಮ ಅವರ ಚಿತ್ರ. ಕೃಷ್ಣ ಎಂದರೆ ಗುಬ್ಬಿ ವೀರಣ್ಣನವರ ಕೃಷ್ಣ ಲೀಲಾ ನೆನಪಿಗೆ ಬರುತ್ತದೆಯಂತೆ.

ಸಮಾಜ ನನ್ನನ್ನು ಹೇಗೆ ಕಂಡಿತು ಎಂದು ನಾನು ತಿಳಿದುಕೊಳ್ಳುವ ಬಗೆ ಹೇಗೆ? ಒಂದು ಗ್ರಂಥದ ಸಾವಿರ ಪ್ರತಿಭೆಗಳು ಹತ್ತು ವರ್ಷಗಳಲ್ಲಿ ಖರ್ಚಾದರೆ, ಅವನ್ನು ಓದಿದವರಲ್ಲಿ ಹತ್ತು ಮಂದಿ ನನಗೆ ಪತ್ರ ಬರೆದರೆ, ಅದರಿಂದ ಜನಗಳು ನನ್ನನ್ನು ಮೆಚ್ಚುತ್ತಿದ್ದಾರೆ ಎಂದು ತಿಳಿಯಲು ಸಾಧ್ಯವೇ? ನಾವು ಬರೆಯುವುದು ಸಾಮಾಜಿಕರೊಡನೆ ಸಂಭಾಷಿಸುವುದಕ್ಕಾಗಿ. ಈ ಸಂಭಾಷಣೆ ಏಕಮುಖಿ ಯಾದದ್ದು ನಾವೇನು ಗ್ರಂಥಗಳಲ್ಲಿ ಅನೇಕ ವಿಚಾರಗಳನ್ನು ಮಂಡಿಸುತ್ತೇವೆ. ಓದುಗರು ನಮ್ಮ ಕಣ್ಮುಂದೆ ಇರುವುದಿಲ್ಲ.

**ವಿಷಯ ವಿಶ್ಲೇಷಣೆ**

ಈ ಕಾದಂಬರಿಯ ಕರ್ನಾಟಕದ ಕರಾವಳಿಯ ಹಳ್ಳಿಯೊಂದರಲ್ಲಿ ನಡೆಯುತ್ತದೆ. ಕಥೆಯು ಅಲ್ಲಿ ಜೀವನದ ಮೊಗ್ಗಲುಗಳನ್ನು, ಕೌಟುಂಬಿಕ ಸಂಬಂಧಗಳನ್ನು ಧಾರ್ಮಿಕ ಆಚರಣೆಗಳನ್ನು ಹತ್ತಿರದಿಂದ ನೋಡುತ್ತದೆ.

ಪಾತ್ರಗಳು

"ಮೂಕಜ್ಜಿ ಹಾಗೂ ಸುಬ್ಬರಾಯ"

ಈ ಕಾದಂಬರಿಗೆ ಕಥಾನಾಯಕ, ನಾಯಕಿ ಇಲ್ಲದಿದ್ದರೂ, ಮೂಕಜ್ಜಿಯು ಕಥೆಯ ನಾಯಕಿಯಾಗಿ ಹಾಗೂ ಸುಬ್ಬರಾಯನನ್ನು ಕಥೆಯ ನಾಯಕನನ್ನಾಗಿ ಪ್ರಮುಖ ಪಾತ್ರವಾಗಿ ನಿರೂಪಿಸಲಾಗಿದೆ. ಸಾಂಪ್ರದಾಯಿಕತೆಯಿಂದ ಹರೆಗಟ್ಟಿದ ಮನಸ್ಸುಗಳನ್ನು ತುಸು ತುಸುವಾಗಿ ಕಾಯಿಸಿ ಕರಗಿಸುವ ಕೆಲಸ ಅಜ್ಜಿಯದು. ಸುಮಾರು ೮೦ ವರ್ಷದ ಅಜ್ಜಿ ಮೂಕಾಂಬಿಕೆ ಮೂಕಾ+ಅಜ್ಜಿ = ಮೂಕಜ್ಜಿಯಾಯಿತೋ, ಅಥವಾ ಅತಿ ನಿಶಬ್ದದಿಂದ ಮಾತನಾಡದೆ ಹಲವಡ ಮೂಖಿಯಾಗಿದ್ದರಿಂದ ಮೂಕಜ್ಜಿಯಾಯಿತೋ, ಎನ್ನುವುದನ್ನು ಕಾರಂತರು ಓದುಗರ ಇಚ್ಛೆಗೆ ಬಿಟ್ಟಿದ್ದಾರೆ.

ಕಥೆಯಲ್ಲಿ ಅಜ್ಜಿ ಮತ್ತು ಮೊಮ್ಮಗ ಸುಬ್ಬರಾಯ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಮೂಡೂರು ಎಂಬ ಹಳ್ಳಿಯ ಕಥೆ. ಮೂರು ಊರುಗಳು ಸೇರಿ ಮುಂದೆ ಮುರೂರಾಗಿ ಮೂಡೂರಾಗಿದೆ. ಕಥೆಯಲ್ಲಿ ಹಲವಾರು ಪಾತ್ರಗಳಿದ್ದರೂ ಮುಖ್ಯವಾಗಿ ಸುಬ್ರಾಯ ಮತ್ತು ಅವರ ಅಜ್ಜಿಯ ಪ್ರಶ್ನೆಗಳು ಮತ್ತು ಉತ್ತರಗಳ ಮೇಲೆ ಕಥೆ ಕೇಂದ್ರೀಕೃತವಾಗಿದೆ.

'ಈ ಕಾದಂಬರಿಯಲ್ಲಿ ಬರುವ ಮೂಕಜ್ಜಿಗೆ ಒಂದು ಅಚ್ಚರಿಯಾದ ಶಕ್ತಿ ಇರುತ್ತದೆ. ಅದೇನೆಂದರೆ ಯಾವುದೇ ವಸ್ತು ಅಥವಾ ಮನುಷ್ಯನನ್ನು ಕಂಡರೆ ಅವರ ಬಗ್ಗೆ ಕನಸುಗಳು ಮೂಡುತ್ತವೆ. ಅಂದರೆ ಅವು ನಿದ್ದೆಯಲ್ಲಿ ಬರುವ ಕನಸುಗಳು ಅಲ್ಲ, ಎಚ್ಚರವಿದ್ದಾಗ ಬರುವ ಕನಸುಗಳು. ಮೂಕಜ್ಜಿ ತನ್ನ ಕನಸುಗಳ ಬಗ್ಗೆ ಅವಳ ಮೊಮ್ಮಗನ ಹತ್ತಿರ ಹೇಳಿಕೊಳ್ಳುತ್ತಾರೆ. ಈ ಕನಸುಗಳು ಮನುಷ್ಯನ ಸಾಮಾಜಿಕ ಬೆಳವಣಿಗೆಗಳು ಮತ್ತು ದೇವರ ಸ್ವರೂಪದ ಬಗ್ಗೆ ಇರುತ್ತವೆ.

ಅಜ್ಜಿ ಮತ್ತೊಂದು ಗುಣ ಕೂಡ ವಿಚಿತ್ರವಾಗಿ ಕಾಣಿಸುತ್ತದೆ. ಅವರು ಹಳಬರು. ಊರನ್ನು ಬಿಟ್ಟು ದೂರ ಹೋದವರಲ್ಲ. ಮನೆಯೇ ಅವರ ಮಠವಾಗಿದ್ದರೂ ಕೂಡ ನಮ್ಮ ಆಸುಪಾಸಿನ ಜನಕ್ಕೆಲ್ಲ ಅವರು ಹೆಸರು ಗೊತ್ತಿತ್ತು. ಅವರು ತಾವಾಗಿಯೇ ಯಾರನ್ನು ಮಾತನಾಡಿಸುವ ಹಂಬಲ ತಾಳಿದನ್ನು ಕಾಣೆ. ಅಷ್ಟೇ ಅಲ್ಲ, ಅವರ ಮತ್ತೊಂದು ನಡತೆಯು ವಿಚಿತ್ರದೆ. ಸುಬ್ಬರಾಯರು ಮನೆ ಮಾಡಿಕೊಂಡು ಇದ್ದ ಮೇಲೆ ಮನೆಗೆ ನಾಲ್ಕು ಮಂದಿ ಬರದೆ ಹೋಗುತ್ತಾರೆಯೇ? ಬಂದೇ ಬರುತ್ತಾರೆ. ಕೆಲವರು ಮನೆಗೆ ಬರುವುದು ಅಜ್ಜಿಗೆ ಹೇಗೆ ಗೊತ್ತಾಗುತ್ತದೋ ಏನೋ? ಥಟ್ಟನೆ ಚಕಿತರಾದಂತೆ ಎದ್ದು ಬಿಟ್ಟು ಕೋಣೆಯ ಒಳಗೆ ಹೋಗಿ ಕುಳಿತುಬಿಡುತ್ತಿದ್ದರು. ಬಂದವರು ಹೊರಟು ಹೋಗುವ ತನಕವೂ ಕಣ್ಣಿಗೆ ಬೀಳುತ್ತಿರಲಿಲ್ಲ. ಅದರಿಂದಲೋ ಏನೋ ಮೂಕಜಿ ಎಂಬ ಹೆಸರು ಅವರಿಗೆ. ಅದಕ್ಕಿಂತ ಹೆಚ್ಚಿಗೆ ಯಾರಿಗೂ ಏನು ತಿಳಿದಿರಲಾರದು. ನಮ್ಮ ನೆರೆ ಗ್ರಾಮಗಳಿಂದ ನೆಂಟರು, ಆಪ್ತರು ಮನೆಗೆ ಬಂದಾಗಲೂ ಸರಿಯೇ, ಅವರ ಕಣ್ಣಿಗೆ ಬಿದ್ದರೂ, ಮಾತನಾಡಿಸಲು ಸಾಹಸ ಪಡುತ್ತಿರಲಿಲ್ಲ. ಅಲ್ಲದೆ ಅವರ ವಯಸ್ಸಿಗೆ ಸಾಟಿಯಾಗುವವರು ಸದ್ಯಕ್ಕೆ ಆಚೀಚೆ ಯಾರ್ಯಾರು ಇರುವಂತೆ ಕಾಣಿಸುತ್ತಿರಲಿಲ್ಲ. ಬರುವ ಆಪ್ತರಲ್ಲಿ

ಒಬ್ಬರೋ, ಇಬ್ಬರೋ, ಹಿರಿಯ ಹೆಂಗಸರು ಮಾತ್ರ, ಮನೆಗೆ ಬಂದಾಗ, ಹೊರಡುವ ಮುಂಚೆ ಜಿಯನ್ನ ಹುಡುಕಿ ಹೋಗಿ, ಅವರ ಕಾಲು ಮುಟ್ಟಿ ಹೋದದ್ದನ್ನು ನೋಡಿದ್ದಾರೆ. ಅಂಥವರು ಕೂಡ ಮಾತನಾಡಿಸುವ ಪ್ರಯತ್ನ ಮಾಡಿದ್ದು ಕಡಿಮೆ, ಅಜ್ಜಿಯ ವಿಷಯದಲ್ಲಿ ಅಷ್ಟೊಂದು ಗೌರವವಿಲ್ಲದೆ ಹೋದರೆ ಹಾಗೆ ಮಾಡಲಾರರು ಎನಿಸುತ್ತದೆ.

*ಸುಬ್ಬರಾಯ ಅವರು ತಮ್ಮ ಅಜ್ಜಿಯನ್ನು ಕೇಳಬೇಕಾದ ಹೆಚ್ಚಿನ ಪ್ರಶ್ನೆಗಳನ್ನು ಕೇಳಲು ಬಯಸುತ್ತಾರೆ. ಸುಬ್ಬರಾಯ ವಿದ್ಯಾವಂತ ಆದರೆ ಅವನ ಜಮೀನು ಮತ್ತು ಹೊಲಗಳನ್ನು ನೋಡಿಕೊಂಡು ಹಳ್ಳಿಯಲ್ಲಿ ಉಳಿಯಲು
ನಿರ್ಧರಿಸುತ್ತಾನೆ. ಅವನಿಗೆ ಹಳ್ಳಿಯ ಧಾರ್ಮಿಕ ಆಚರಣೆಗಳು, ಅವುಗಳ ಇತಿಹಾಸ ತಿಳಿಯುವ ಹಂಬಲ.

*ಸೀತೆ- ಸುಬ್ಬರಾಯನ ಹೆಂಡತಿ
*ಜನಾರ್ಧನ-ಸುಬ್ಬರಾಯನ ಸ್ನೇಹಿತ
ಅವನೊಡನೆ ಇವನ ಒಡನಾಟ ಹೆಚ್ಚು.
*ನಾರಾಯಣ- ಸುಬ್ಬರಾಯನ ತಮ್ಮ.

**ಕಥಾವಸ್ತು**

ಸುಬ್ಬರಾಯನು ಕುತೂಹಲದಿಂದ ಕೂಡಿರುವ ವ್ಯಕ್ತಿ ತಾನು ಚಿಕ್ಕವನಿಂದ ತಿಳಿದುಕೊಂಡ ಕಥೆಗಳ ಸಾರ ಏನೆಂದು ತಿಳಿಯುವ ಕುತೂಹಲ. ಸುಬ್ಬರಾಯನ ಅಜ್ಜಿಯ ಹೆಸರು, ದೇವಿ ಮೂಕಾಂಬಿಕೆ ಮೇಲೆ ಇಡಲಾಗಿದೆ. ಅಜ್ಜಿಯ ವಯಸ್ಸಿನಲ್ಲಿ ವಿವಾಹವಾದ ಕೆಲವೇ ತಿಂಗಳಿಗೆ ಗಂಡನನ್ನು ಕಳೆದುಕೊಂಡು ವಿಧವೆಯಾದಳು. ಅನಕ್ಷರಸ್ತೆಯಾದರು ಹಿಂದೆ ನಡೆದುಹೋದ ಘಟನೆಗಳ, ಈಗ ಆಗುತ್ತಿರುವ ಘಟನೆಗಳು, ತನ್ನ ಅಜ್ಜಿಯ ಜೊತೆ ನಡೆಸುವ ಚರ್ಚೆಗಳೇ ಕಥೆಯ ಜೀವಾಳವಾಗಿದೆ.

ಸುಬ್ಬರಾಯ ದೇವರ ಅಸ್ತಿತ್ವದ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ, ಮೂಕಜ್ಜಿ ತನ್ನದೇ ಆದ ರೀತಿಯಲ್ಲಿ ನೀಡಿದ ಉತ್ತರಗಳನ್ನು ನಗುವಂತೆ ಮಾಡಿದರೂ, ಒಂದು ಕ್ಷಣ ಯೋಚಿಸುವಂತೆ ಮಾಡಿದೆ. ಸುಬ್ಬರಾಯ, ಅಜ್ಜಿಯ ಮಗ್ಗುಲಲ್ಲಿ ಕುಳಿತಾಗ "ಏನು ಯೋಚನೆ"? ಎಂದು ಕೇಳಿದರು. ಯೋಚನೆ ಎಲ್ಲಿಂದ ಬಂತು? ಯಾವುದಕ್ಕಾಗಿ ಯೋಚನೆ ಮಾಡಬೇಕು? ಪರೀಕ್ಷೆ ಮುಗಿಸುವವರೆಗೆ ಯೋಚನೆ ಇತ್ತು, ಈಗ ಆ ಯೋಚನೆ ಇಲ್ಲ ಎನ್ನುತ್ತಾನೆ.

ಆ ಪರೀಕ್ಷೆ ಮುಗಿದಿದ್ದಕ್ಕೆ ನನ್ನ ಪರೀಕ್ಷೆಗೆ ಹೊರಟಿದ್ದೀಯಲ್ಲವೇ? ಎಂದರು.

ತಬ್ಬಿಬಾಗಿ "ಹಾಗಲ್ಲ ಅಜ್ಜಿ ನನ್ನ ಸಮಾಧಾನ ಮುಖ್ಯವಲ್ಲ, ನಿಮಗೆ ಬೇಕಾಗಿ ನೀವು ದೇವರಿಗೆ ಸುತ್ತು ಬಂದದ್ದು ಅಲ್ಲ ಅನ್ನುತ್ತೀರಾ? ಎಂದು ಪ್ರಶ್ನಿಸುತ್ತಾನೆ.

ಅದಕ್ಕೆ ಅಜ್ಜಿ ದೇವರಿಗೆ ಸುತ್ತು ಬರಲಿಕ್ಕೆ ಆಗುತ್ತದೆಯೇ ಮರಕ್ಕೆ ಸುತ್ತು ಬಂದೆ, ಆ ಮರ ನನಗಿಂತಲೂ ಹಳೆಯದು.

ನಾನು ಗಳಿಗೆಗೆ ಸುತ್ತು ಬರುವ ಹಾಗೆ ಇದಕ್ಕೂ ಸುತ್ತು ಬಂದೆ ಎಂದರು.

"ದೇವರಿಗೆ ಸುತ್ತು ಬರುವುದು ಬೇಡ ಎನ್ನುತ್ತೀರಾ?

"ಬರುವವರು ಬರಲಿ".

"ಅಂದರೆ"?

"ದೇವರು", ಅಷ್ಟು ಸಣ್ಣವನು ಅಂದುಕೊಂಡರೆ ಸುತ್ತು ಬರಲಿ ಎಂದಿದ್ದಕ್ಕೆ, ಸುಬ್ಬರಾಯ ಅಜ್ಜಿಯ ಬಳಿ ನೇರವಾಗಿ, ನಿಮಗೆ ದೇವರಲ್ಲಿ ನಂಬಿಕೆ ಇಲ್ಲವೋ? ಎಂದು ನೇರವಾಗಿ ಪ್ರಶ್ನಿಸಿದನು. ಅಜ್ಜಿಯ ಉತ್ತರ ಹೀಗಿತ್ತು. "ದೇವರು ಎಂಬುದು ನಾವು ನಂಬಿದರೆ ಉಂಟು. ನಂಬಿದ್ದಾರೆ ಜನ. ಈ ಮರವನ್ನು ನೆಟ್ಟವರು ನಂಬಿದವರೆ. ಅಮ್ಮ ಅದರ ಹತ್ತಿರ ನಿತ್ಯವೂ ಏನೇನೋ ಬೇಡುತ್ತಿದ್ದ ನೆನಪು. ನನಗೆ ಬುದ್ಧಿ ಬರುವ ಮೊದಲು ನಾನು ಬೇಡಿರಬೇಕು. ಗಂಡನನ್ನು ಕೊಡು ಎಂದು. ಒಂದು ದಿನ ಅವನೇ ಕೊಟ್ಟ ಎಂತ ತಿಳಿದಿರಲೂ ಬಹುದು. ಅನಂತರ ಆಯ್ತಲ್ಲ ಅವನೇ ಕೊಂಡ, ಇದೆಲ್ಲಾ ಮರುಳು ಎನಿಸಿತು. ನಂಬಿಕೆಯು ಒಂದು ಮರಳು, ಈಗ ಸುತ್ತು ಬಂದರೆ ಅದು ಅಭ್ಯಾಸದಿಂದ, ಇಲ್ಲ ಬರೀದ ಮನಸ್ಸಿಗೆ ಹಿತ ಕಾಣಿಸುತ್ತದೆ", ಎಂದಳು. ಮತ್ತೊಂದು ಕಡೆ ದೇವರು ನಮ್ಮನ್ನು ಕುಣಿಸುತ್ತಾನೆ ಎಂಬ ಮಾತಿಗೆ ಅಜ್ಜಿಯ ಮಾತು ಒಪ್ಪುವಂತದ್ದಾಗಿದೆ. ಅವನು (ದೇವರು) ಏನು ಅಂದ ಅಥವಾ ಅನ್ನುತ್ತಾನೆ ಎಂಬುದು ನಿನಗೆ ತಿಳಿಯುತ್ತದೆಯೇ? ಹಾಗೆ ಕುಣಿಯುತ್ತೇನೆ, ಎನ್ನಲಿಕ್ಕೆ. ಅವನು ಅಂದದ್ದು ಎನ್ನುವುದೆಲ್ಲಾ, ನಾವು ನಮ್ಮ ನಮ್ಮ ಮನಸ್ಸಿಗೆ ಕಂಡ ಹಾಗೆ

ಅಂದದ್ದು, ಅದು ಅದ್ಭುತ ಎನಿಸುತ್ತದೆ.

ಹಾಗೆಯೇ ನಾವು ಕೇಳಿರುವ ಪುಣ್ಯಕೋಟಿ ಕಥೆಯನ್ನು ಅಜ್ಜಿ ಹೇಳುವ ರೀತಿ ಬೇರೆಯಾಗಿದೆ.

"ಮಗು ಕಥೆ ಕಥೆಯೇ", ಎನ್ನುತ್ತಿದ್ದರು.

"ನಿಜ ಅಲ್ಲ ಅನ್ನುತ್ತೀರಾ"? ಎಂದು ನಿರಾಶೆಯಿಂದ ಪ್ರಶ್ನಿಸಿದರೆ, "ನಿನಗೆ ಏನಾಗಬೇಕೀಗ?, ಪುಣ್ಯಕೋಟಿ ದನ ಹುಲಿಯ ಬಾಯಿಗೆ ಬೀಳಬೇಕೆಂದಿದೆಯೋ?

"ಇಲ್ಲ".

"ಹುಲಿ ಮೇಲಕ್ಕೆ ಹಾರಿ ಪ್ರಾಣ ಬಿಡಬಾರದು ಎಂದಿದೆಯೋ?

"ಇಲ್ಲ".

"ಹಾಗಿದ್ದ ಮೇಲೆ ಒಂದನ್ನು ಒಂದು ತಿಂದೆ ಬದುಕಬೇಕು ಈ ಜಗತ್ತಿನಲ್ಲಿ. ಹುಲಿ ಇದ್ದರೆ ದನವಿಲ್ಲ, ದನ ವಿದ್ದರೆ ಹುಲಿಯಿಲ್ಲ".

"ಎರಡು ಬದುಕಲಿ" ಎಂದರು ಸುಬ್ಬರಾಯರು.

'ಮತ್ತೆ? ಹುಲಿ ಏನು ತಿನ್ನಬೇಕು ಹುಲ್ಲನ್ನೇ? ಹುಲಿಗೂ ಜೀವವಿದೆಯಲ್ಲ, ಹಾಗೆ ಕಥೆ ತಿರುಗಿಸಿದರೆ ಹುಲ್ಲನ್ನು ತಿನ್ನಲು ಬಂದ ದನವನ್ನು ಕಂಡು, ಹುಲ್ಲು ಹೆದರಿ ತನ್ನ ಮರಿಯ ಹತ್ತಿರ ಹೋಗಿ ಬರುತ್ತೇನೆ" ಎನ್ನಬೇಕಾದಿತ್ತು.

ಅಜ್ಜಿ ತಮ್ಮಷ್ಟಕ್ಕೆ ಏನೇನೋ ಕನಸು ಕಂಡವರ ಹಾಗೆ ಗೊಣಗುತ್ತಾರೆ. ಅವರ ಈ ಗೊಣಗು ಮಾತುಗಳನ್ನು ಕೇಳಿ ಹಾಗೇ ಅಭಿಪ್ರಾಯ ಬರುವುದು ಸಹಜ. "ಮೂಕಜ್ಜಿಗೆ ಮುಪ್ಪಿನ ಮರಳು"! ತಮ್ಮಷ್ಟಕ್ಕೆ ಆಡಿಕೊಳ್ಳುತ್ತಿರುತ್ತಾರೆ.

**ರಾಮಣ್ಣ ನಿಂಗಿಯ ಕಥಾ ಪ್ರಸಂಗ:**

ಈ ಕಥೆಯಲ್ಲಿ ಬಹು ಮುಖ್ಯ ಪ್ರಸಂಗ ಅಥವಾ ಕಥೆ ಇದಾಗಿದೆ. ಸುಬ್ಬರಾಯರು, ಅಜ್ಜಮ್ಮ ಮನೆಯ ಚಾವಡಿಯಲ್ಲಿ ಕೈಯಲ್ಲಿ ಏನೋ ಹಿಡಿದುಕೊಂಡು ಕಂಬಕ್ಕೊರಗಿಕೊಂಡು ಮಣಮಣ ಅನ್ನುತ್ತಿದ್ದನ್ನು ಕಂಡು, ಕುತೂಹಲದಿಂದ ಸ್ವಲ್ಪ ಹಿಂದಕ್ಕೆ ಸರಿದು, ಅವರ ಧ್ವನಿ, ಮಾತುಗಳನ್ನು ಕೇಳಿಸಿಕೊಳ್ಳಲು ಕಿವಿನಿಮಿರಿಸಿ ಕೇಳತೊಡಗಿದರು.

ಅಜ್ಜಮ್ಮ ಹೀಗೆ ಬಡಬಡಾಯಿಸುತ್ತಿದ್ದರು. ಹೌದು ಇದು ನಿನಗೆ ಬೇಕು, ಈ ಕರಡಿಗೆ ಮರೆತಿಲ್ಲ ನೀನು, ಯಾಕೆ ಮರೆತಿಯಾ? ಅವಳು ನಿನಗೆ ಕೊಟ್ಟಿದ್ದಲ್ಲವೇ? ಅದನ್ನು ಹೆಣೆಯಲಿಕ್ಕೆ ಎಷ್ಟೆಲ್ಲ ಭಂಗ ಬಂದಿಲ್ಲ! ಕಾಡಿಗೆ ಹೋಗಿ, ಬೆತ್ತ ತಂದು, ಸಿಗಿದು, ಗೀಸಿ, ಹೆಣೆದು ಕೊಟ್ಟಳು. ನಿನ್ನ ವೀಳಯಕ್ಕಾಗಲಿ- ಎಂದು, ಅವಳಿಗೆ ನಿನ್ನ ಮೇಲೆ ಪ್ರೀತಿ ಕಡಿಮೆ ಎನ್ನುತ್ತೀಯಾ? ಅವಳು ಒಳ್ಳೆಯವಳೇ.

ಅಲ್ಲ ಏಕೆ ಸಿಟ್ಟಾಗುತ್ತೀಯಾ? ನಿನ್ನನ್ನು ಬಿಟ್ಟು ಓಡಿ ಓದವಳನ್ನು, ಒಳ್ಳೆಯವಳು ಅಂದಿದ್ದಕ್ಕೇನು? ನಿನ್ನ ಮನೆಗೆ

ಅವಳು ಒಲಿದೇ ಬಂದಳು. ನೀನೆ ಒಂದು ಲೆಕ್ಕಕ್ಕೆ ಪಡಪೋಷಿ. ಅವಳ ಮುಂದೆ ನಿನ್ನ ಗಂಡಸುತನದ ಜರ್ಬನ್ನೇ

ತೋರಿಸಿದೆ. ಏನೆಂದೇ ನೀನು? ನಿನ್ನ ಚಂದಕ್ಕೆ ನಾನು ಮರುಳಾದವನಲ್ಲ. ನಿನ್ನ ಮಾಯೆಗೆ ನಾನು ಮರುಳಾಗೇ ಎಂದು

ಚೇಷ್ಟೆಗಾದರೂ ನೀನು ಹೇಳಿದ್ದು ಇಲ್ಲವೋ? ಮತ್ತೆ ಈ ಮಾತು ಅಂದಿಲ್ಲವೇ? ಮೈ ಒಯಿನಾಗಿದ್ದರೇನಂತೆ? ನನ್ನ

ಮನೆಗೆ ಬಂದ ಹೆಣ್ಣು ಮಕ್ಕಳು ಗಾಣದ ಎತ್ತಿನಹಾಗೆ ಚಾಕರಿ ಮಾಡಬೇಕಾದಿತು. ದುಡಿಯದೇ ತಿಂಬ ಮನೆ ಇದಲ್ಲ.

ದುಡಿಯುವುದರಲ್ಲಿ ಕಳ್ಳತನ ಮಾಡಿದರೆ ಗುದ್ದಿ ಹಣ್ಣು ಮಾಡಿಯೇನು ಅಂದಿಲ್ಲವೇನು ನೀನು?

ಯಾರು ದುಡಿಯುವುದಕ್ಕೆ ಹೆದರುತ್ತಾರೆ ಎಂದಿಲ್ಲವೇನು ಅವಳು? ಅಥವಾ ದುಡಿಯಲಿಕ್ಕೆ ಕಡಿಮೆ ಮಾಡಿದ್ದಾಳೆ? ಆದರೂ ನೋಡು, ರಾಮಣ್ಣ ನೀನು ಮಾಡಿದ ಕೆಲಸ ಸಮವೇ? ಮದುವೆಯಾಗಿ ಬಂದು ಮೂರು ವರ್ಷ ಸಂದರೂ, ಒಂದು ಹೊಸ ಸೀರೆ ತುಂಡನ್ನು ಅವಳ ಮೈ ಮುಚ್ಚಲಿಕ್ಕೆ ಕೊಡಬೇಡವೇ? ಹೆಣ್ಣಲ್ಲವೆ ಅವಳು ಅರಿವೇ, ಒಡವೆ, ವಸ್ತುಗಳ ಮೋಹ ಇದ್ದರೆ ಆಶ್ಚರ್ಯವೇ? ನೀನು ಕೌಪಿನ ತೊಟ್ಟು, ಗಾಣ ತಿರುಗಿಸಿದ ಹಾಗೆ, ನಿನ್ನ ಹಿಂದೆ ಅವಳು ಹರಕು ಅರಿವಯಲ್ಲಿ ತಿರುಗಬೇಕೆಂದರೆ? ಯಾರ ಹತ್ತಿರವೋ ಗೊಣಗಿದಳು. ನಿನ್ನ ಉದಾಸೀನ ಕಂಡು, ಅವರು ಅವಳಿಗೆ ಏನು ಹೇಳಿಕೊಟ್ಟರು? ನಿನ್ನನ್ನು ಎದುರಿಸಲಿಕ್ಕೆ ಓಡಿ ಹೋದಳು. ನೀನು ಹುಡುಕಿರಬೇಕು ಆಮೇಲೆ. ಆದರೆ ಅಷ್ಟರಲ್ಲಿಯೇ ಧನ ಹೋಗಿ ಹುಲಿಯ ಗವಿಯನ್ನು ಸೇರಿದ ಹಾಗಾಯಿತು. ಅದೇ ಊರಿನವಳು ಅವಳು ಅಲ್ಲವೇ? ಅವಳ ಮೇಲೆ ಶೀನಪ್ಪ "ಎಷ್ಟು ನಜರು ಇಟ್ಟಿದ್ದನೋ; ಎಂದಿಂದ ಇಟ್ಟಿದ್ದನೋ!" ತವರಿಗೆ ಓಡಿ ಬಂದವಳನ್ನು ಎಲ್ಲಿ ಅಡಗಿಸಿಟ್ಟನೋ, ಏನೋ ಆಸೆ ಹುಟ್ಟಿಸಿದನೋ? ನಿನಗೆ ಇದೆಲ್ಲ ಗೊತ್ತಾಗುವಾಗ, ನಿನ್ನ ಗಂಡಸುತನದ ಡೌಲು ಇಳಿದು ಬುದ್ಧಿ ಬರುವಾಗ ಎಲ್ಲವೂ ತೀರ ಮುಗಿದು ಹೋಗಿತ್ತು. ಶೀನಪ್ಪನ ಬಲೆಗೆ ಅವಳು ಬಿದ್ದಿದ್ದಾಳೆ- ಎಂಬ ಸುದ್ದಿ ಊರಲ್ಲಿ ಹಬ್ಬಿದ ಮೇಲೆಯೇ ನಿನಗೆ ಜ್ಞಾನ ಬಂದದ್ದು.

ಆದರೂ ರಾತೋರಾತ್ರಿ ಹೋದೆ. ಬೇಡಿದೆ. ಅವಳು, ಹೋಗಿ ನೀವಿನ್ನು ನನ್ನ ಆಸೆಯನ್ನು ಬಿಡಿ ಎಂದಳು.

ಅಂದದ್ದು ಸಿಟ್ಟಿನಿಂದಲ್ಲ, ಸಂಕಟದಿಂದ, ತನ್ನ ಸಿಟ್ಟು ಸೆಡೆಗಳಿಂದಲೇ ತಾನಾಗಿ ಹಳ್ಳ ಹಾರಿಕೊಂಡೆ ಎಂದು ಗೊತ್ತಾಗಿಯೇ ಅವಳು ಹೇಳಿದ್ದು. ನೀನಾಗ ಆಸೆ ಬಿಟ್ಟು ಬಂದೆ. ನಿನ್ನ ಮನಸ್ಸು ದೊಡ್ಡದು ರಾಮಣ್ಣ. ಶೀನಪ್ಪ, "ಎಷ್ಟು ಸಂಸಾರಗಳನ್ನು ಹಾಳು ಮಾಡಿದವನೋ! ಸಣ್ಣದರಲ್ಲಿ ಈ ಮನೆಗೆ ಬರುತ್ತಿದ್ದವನೇ ಅಲ್ಲವೇ? ಈಗಲಾದರೂ ಅವನಿಗೆ ಏನು ದೊಡ್ಡ ಪ್ರಾಯ?" ಅಂಕೆಯಿಲ್ಲದ ಕಪಿ ಅದು. ಅವನು ನಮ್ಮ ಮನೆಗೆ ಬಂದ ಅಂದರೆ ನನಗೆ ಬಿಸಿಗಾಳಿ ಬಡಿದ ಹಾಗೆ.

ನಾಲ್ಕು ದಿನದ ಮೇಲೆ ಅವನು ಅವಳನ್ನು ಬಿಟ್ಟ. ಇನ್ನು ಯಾವಳನ್ನೋ ಹಾರಿಸಿ ತಂದ. ಅಪ್ಪ ಮಾಡಿಟ್ಟಿದ್ದು ಇದಕ್ಕೆ ಆಯಿತು. ಈಗ ಅವನು ಉದ್ಧಾರವಾಗಿಲ್ಲ, ಆ ಕಾಲದಲ್ಲಿ ಅವನಿಗೂ ಬುದ್ಧಿ ಹೇಳಿದವರಿಲ್ಲ. ಹೆಣ್ಣಿನ ಮೋಹ ಎಂದರೆ, ಹೆಂಡ ಕುಡಿದ ಹಾಗೆಯೇ ಇತ್ತ ನಾಗಿಯ ಗತಿ ಏನಾಯಿತು? ಎರಡೆರಡು ಮಕ್ಕಳನ್ನು ಹೆತ್ತಳು, ಅವಳು ತಬ್ಬಲಿಯಾದಳು. ಈಗ ಎಲ್ಲಿದ್ದಾಳೆ ಅಂತೂ ನಿನ್ನ ಹಿಂದಕ್ಕೆ ಬರಲಿಲ್ಲ. ತಾನು ಎಂಜಲಾದ ಎಂಬುದರಿಂದ. ಒಂದು ಹತ್ತು ದಿನ ಅವಳ ಮನಸ್ಸು ಎಂಜಲಾದದ್ದು ನಿಜ. ಪ್ರಾಯ ಅಂಥದ್ದು. ಸೊಕ್ಕು ಅಂಥದ್ದು. ನೀನು ಮನೆ ಬಿಟ್ಟು ಹೋಗುವ ಹಾಗೆ ಮಾಡಿದ ರೀತಿಯೂ ಅಂಥದ್ದೆ. ನೀನು ಒಂದು ಹೆಣ್ಣನ್ನ ಹೊಟ್ಟೆ-ಬಟ್ಟೆಗೆ ಕೊಟ್ಟು ಸಾಕುವ ತ್ರಾಣ ಇಲ್ಲ ಎಂದು ತೋರಿಸಿದೆ.

ನನಗೆ ಗೊತ್ತು ಇಷ್ಟೆಲ್ಲಾ ಆಗುತ್ತದೆ ಎಂದು ನಿನಗೆ ಮೊದಲೇ ಗೊತ್ತಿದ್ದರೆ ನೀನೆಂದು ಹಾಗೆ ಮಾಡುತ್ತಿರಲಿಲ್ಲ.

ಎಂದು. ಹಾಗಿದ್ದುದರಿಂದಲೇ ಅಲ್ಲವೇ ಬಂದರೆ ಅವಳೇ ಬರಬೇಕು, ಬೇರೆ ಬೇಡವೇ ಬೇಡ ಎಂದು ಹಠ ಹಿಡಿದು ಕುಳಿತ್ತಿದ್ದೀಯಾ. ಒಂದು ಲೆಕ್ಕಕ್ಕೆ ನಿನಗೆ ಏನು ಕಡಿಮೆ ಆಗಿಲ್ಲ ತಂಗಿಯರಿದ್ದಾರೆ, ಅಳಿಯಂದಿದ್ದಾರೆ. ನೀನು ದುಡಿಯುವವನೇ ಆದರೂ ಒಯಿನಿ ಇಲ್ಲದ ಬದುಕು ನಿನ್ನದು. ರಸ ಹಿಂಡಿದ ಕಬ್ಬಿನ ಜೊಗಟಿ ನೀನು. ನಲವತ್ತು ವರ್ಷ ಒಂದು ಹೆಚ್ಚಲ್ಲ, ಪ್ರಾಯ. ಇನ್ನೊಂದು ಹೆಣ್ಣು ಸಿಗಲಾರದು. ಛಲಗಾತಿ ಸಿಗಲಾರಳು. ಬೇಕೆನಿಸಿದರೆ ಮದುವೆಯಾಗು, ಅದೊಂದನ್ನು ಅವನೇ ಮಾಡಿದ್ಯಾನಲ್ಲ, ಈ ಜಗತ್ತು ದೇವರ ಮಾಯೆ- ಎನ್ನುತ್ತಾರೆ ಎಲ್ಲರೂ. ನಾನು ಅನ್ನುತ್ತೇನೆ-

"ಗಂಡು ಹೆಣ್ಣಿನ ಮಾಯೆಯಿಂದಲೇ ಜಗತ್ತು. ಅವು ಎರಡು ಇಲ್ಲದೆ ಹೋಗಿದ್ದರೆ ಜಗತ್ತೆಂಬುದು ಬರಡು."

ಏನು ಉಂಟಂತೆ ಅದರಲ್ಲಿ ? ಅದನ್ನು ಮಾಡಿದ್ದರಿಂದಲೇ ಸಾವಿರ ಸುಖ-ಸಾವಿರ ದುಃಖ ಹುಟ್ಟಿಕೊಂಡಿತು. ಸಾವಿರ ರುಚಿ-ಸಾವಿರ ರುಚಿ ಹುಟ್ಟಿಕೊಂಡಿತು. ಇರಬೇಕು, ಈಜಬೇಕು, ಇದ್ದು ಜಯಿಸಬೇಕು. ಎಂಬ ಛಲವೂ ಕೆಲವು ಜೀವಗಳಲ್ಲಿ ಕಾಣಿಸಿಕೊಂಡಿತು. ಆದುದರಿಂದಲೇ ಬದುಕು ಎಂಬ ಪದಾರ್ಥ ಇದೆ ಎನಿಸತೊಡಗಿತು.

ಇಂತಹ ಕಥೆಗಳು ನೂರಾರಿವೆ. ನಿಜ ಕಥೆಗಳಲ್ಲೂ ಉಂಟು. ಅದು ಬದುಕಿನಲ್ಲೂ ಉಂಟು. ಆಗ ನನಗೆ ಪುಸಲಾಯಿಸಿದ್ದು, ಅದರಲ್ಲಿ ಆಕೆಯ ತವರು ಮನೆಯ ಪಾತ್ರವೂ ಇರಬಹುದಾದದ್ದು. ಅವಳು ಜಾತಿಯಿಂದ ಹೊರಗಾದದ್ದು, ಮಕ್ಕಳನ್ನು ಸಾಕುವ ಬಾರ ಹೊತ್ತದ್ದು. ಅಷ್ಟಿದ್ದರೂ ತಾನು ರಾವಣನ ಜೊತೆಗೆ ಹೋಗದೆಯೇ, ಅವನ ಗೌರವ ಉಳಿಸಿದ್ದು. ಇಂತಹ ವಿಚಾರ ಸರಣಿ, ನನ್ನಲ್ಲಿ ಮೂಡಿ ಅವಳ ವಿಷಯದಲ್ಲಿ ಮರುಕವನ್ನು ಹುಟ್ಟಿಸಿತು.

ಮೂಕಜ್ಜಿಯು ತನಗೆ ಕಾಣುವ ಅನಿಸಿದ ವಿಷಯಗಳ ಪ್ರಸ್ತಾಪ ಮಾಡಿರುವುದರ ಜೊತೆಗೆ ಸುಬ್ಬರಾಯನು ಅನೇಕ ಪ್ರಶ್ನೆಗಳ ಮೂಲಕ ಈಗಿನ ಜನಾಂಗದವರಿಗೆ ಉತ್ತರ ಕೊಡಿಸುವ ಕೆಲಸ ಮಾಡಿದ್ದಾರೆ.

ಮೂಕಜ್ಜಿ ಮತ್ತು ಅವರ ಮೊಮ್ಮಗ ಸುಬ್ಬರಾಯ ಅವರ ವಿವಿಧ ವಿಷಯಗಳು ಮತ್ತು ಸನ್ನಿವೇಶಗಳ ಸಂವಾದವನ್ನು ವಿವರಿಸುತ್ತದೆ. ಸಮಾಜದಲ್ಲಿ ಈಗಿನ ಜಮಾನದ ಮನುಜರು ತಮ್ಮ ಆಸೆ ಆಕಾಂಕ್ಷೆಗಳಿಗೆ ದಾಸರಾಗಿ ತಮ್ಮ ಜೀವನವನ್ನು ಯಾವ ಮಟ್ಟಿಗೆ ದುಸ್ತಿಗೆ ತೆಗೆದುಕೊಂಡು ಹೋಗುತ್ತಾರೆ, ಎಂಬುದನ್ನ ರಾಮಣ್ಣನಿಗೆ ಕಥಾಪ್ರಸಂಗದಲ್ಲಿ ಕಾಣಬಹುದು. ರಾಮಣ್ಣನಿಗೆ ನಿಂಗಿ ಸ್ಪೂರದ್ರೂಪಿಯಾದ ಹೆಂಡತಿ. ರಾಮಣ್ಣ ಅವಳ ವಯೋ ನಿಮಿತ್ತ ಆಸೆಗಳನ್ನು ಅರಿಯದೆ, ತನ್ನ ಪಾಡಿಗೆ ಇದ್ದಾಗ, ನಿಂಗಿಗೆ ಆಮಿಷಗಳನ್ನು ಒಡ್ಡಿ, ಆಭರಣಗಳ ಲೋಭಕ್ಕೆ ಒಳಗಾಗಿ, ನಿಂಗಿ ಯಾವ ರೀತಿ ತನ್ನ ಜೀವನವನ್ನು ಹೀನ ಸ್ಥಿತಿಗೆ ಕೊಂಡೊಯ್ದು, ನಂತರ ಯಾರ ಮೇಲೂ

ಮೋಹವಿಲ್ಲದೆ ತನಗಾದ ಮೋಸದ ಜ್ವಾಲೆಯಲ್ಲಿ ಬೇಯುತ್ತಾ, ಹಗೆ ತೀರಿಸಿಕೊಳ್ಳಲು ಯಾರ ಹಂಗನ್ನು ಆಶ್ರಯಿಸದೆ, ಹುಟ್ಟಿದ ಮಕ್ಕಳನ್ನು ಬೆಳೆಸುವ ಆ ಪರಿ ಕೆಲವು ಸ್ತ್ರೀಯರನ್ನು ಬಿಂಬಿಸಿರುವಂತೆ ಮನದಟ್ಟು ಮಾಡುತ್ತದೆ. ಅಜ್ಜಿಯ ಮಾತಿನಲ್ಲಿ "ಎಲ್ಲವೂ ಏನಾಗಬೇಕೆಂದಿರುತ್ತೋ ಹಾಗೆಯೇ ಆಗುವುದು" ಎನ್ನುವುದು ಸ್ಪಷ್ಟವಾದಂತೆ ಕಾಣುತ್ತದೆ.

ಅಜ್ಜಿಗೆ ವಿಗ್ರಹ ಆರಾಧನೆ, ತಾಂತ್ರಿಕ ತಜ್ಞರು, ಜೈನ ಮತ್ತು ಬೌದ್ಧ ಧರ್ಮದ ಬಗ್ಗೆ ತನ್ನದೇ ಆದ ನಂಬಿಕೆ ಮತ್ತು ಕಥೆಗಳು ಇದ್ದವು.

**ಉಪಸಂಹಾರ**

ಕಾರಂತರು ಕೇವಲ ಸಾಹಿತಿಯಲ್ಲ. ರಂಗಭೂಮಿ, ಯಕ್ಷಗಾನ ಕಲಾವಿದರು, ಭರತನಾಟ್ಯ, ಶಿಲ್ಪಕಲೆಯಲ್ಲಿ
ಸಾಕಷ್ಟು ಪರಿಣತಿ ಹೊಂದಿದವರು. ಇಂಗ್ಲಿಷನ್ನು ಸರಾಗವಾಗಿ ಮಾತನಾಡಬಲ್ಲವರು. ತಮ್ಮ ಸರಳ ವಿಧಾನ ಹಾಗೂ ಭಾಷೆಯಿಂದ ಓದುಗರ ಗಮನ ಸೆಳೆಯುವ ಶಕ್ತಿ ಉಳ್ಳವರು. ಒಟ್ಟಿನಲ್ಲಿ "ಕಾರಂತರು ಒಬ್ಬ ಸಕಲ ಕಲಾ ವಲ್ಲಭ"
ಎಂಬುದು ತಿಳಿಯುತ್ತದೆ. ಕಾರಂತರ ಮೂಕಜ್ಜಿಯ ಕನಸುಗಳು ಕಥೆಯಲ್ಲಿ ಮೂಕಜ್ಜಿಯ ಉತ್ತರಗಳು ಅಷ್ಟು ಆಳದ ವಿಚಾರಗಳಿಂದ ಕೂಡಿದ ಎಲ್ಲರೂ ಒಪ್ಪಲೇಬೇಕಾದಂತಹ ಅನುಭವದ ಮಾತುಗಳನ್ನು ಸೃಷ್ಟಿಸಿವೆ. "ವೈಚಾರಿಕತೆ ಆಧ್ಯಾತ್ಮದ ಮಿಶ್ರಣಗಳನ್ನು ತೂಗಿ ಅಳೆಯುತ್ತಾ ನಮ್ಮ ದೃಷ್ಟಿಕೋನವನ್ನು ಕೆಲಸಮಯ, ಒಟ್ಟಿಗೆ ಇನ್ನೊಂದು ದಾರಿಗೆ ತರಬಲ ವಿಚಾರಗಳು ಮೂಕಜ್ಜಿಯವು ದೇವರು-ದಿಂಡರು, ಭಕ್ತಿ-ಭಾವ, ನಂಬಿಕೆ, ಸದ್ಗುಣ-ದುರ್ಗುಣ, ಆಚಾರ-
ವಿಚಾರ, ಸಜ್ಜನ-ದುರ್ಜನ, ಸುಖ-ದುಃಖ ಇವೆಲ್ಲವನ್ನು ತಮ್ಮ ಕಾದಂಬರಿಯಲ್ಲಿ ಅಚ್ಚುಕಟ್ಟಾಗಿ ವಿವರಿಸಿ
ಕುತೂಹಲವನ್ನು ಹೆಚ್ಚಿಸಿದ್ದಾರೆ.

ಕಥೆಯು ಕರಾವಳಿಯಲ್ಲಿ ಆರಂಭವಾದರೂ ಪ್ರತಿಯೊಂದು ಊರಿನ, ಪ್ರತಿಯೊಂದು ಮನಸ್ಸನ್ನು
ಹಿಡಿಯುವಂತಹ ಭಾಗವಾಗಿದೆ. ಪ್ರತಿಯೊಂದು ಮನೆಯಲ್ಲಿನ ಮನಸುಗಳು, ಮೂಕಜ್ಜಿ ಮತ್ತು ಸುಬ್ಬರಾಯನ
ರೀತಿಯ ಪಾತ್ರಗಳನ್ನು ಹೊಂದಿರುತ್ತವೆ. ಕಥೆ ಓದುವಾಗ ನಾವೇ ಒಂದು ಕ್ಷಣ ಕಳೆದು ಹೋಗಿ ಯಾವುದೋ ಒಂದು ಪಾತ್ರಧಾರಿಯಾಗಿ ಪಾತ್ರವನ್ನು ಅನುಭವಿಸುತ್ತೇವೆ. ಮೂಕಜ್ಜಿ ಹೇಳುವ ಮಾತುಗಳು ಸತ್ಯವಾಗಿರುವುದರಿಂದ, ಒಪ್ಪಿಕೊಳ್ಳುವಂತಹವೆ.

"ಆಡು ಮುಟ್ಟದ ಸೊಪ್ಪಿಲ್ಲ, ಕಾರಂತರು ಬರೆಯದ ಸಾಹಿತ್ಯ ಪ್ರಕಾರವೇ ಇಲ್ಲ", ಎಂಬುದು ಕಥೆಯ ಪ್ರತಿಯೊಂದು ಹಂತದಲ್ಲೂ ನಿರೂಪಿತವಾಗಿದೆ.

ಈ ಕಾದಂಬರಿಯೂ ಕೇವಲ ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷ್ ತಮಿಳು ತೆಲುಗು ಹಿಂದಿ ಒರಿಯ ಮತ್ತು ಮಲಯಾಳಂ ಮುಂತಾದ ಹಲವು ಭಾಷೆಗಳಲ್ಲಿ ಅನುವಾದ ಗೊಂಡಿದೆ. ಮಲಯಾಳಂನಲ್ಲಿ "ಮೂಕಾಂಬಿಕಾಯುಡ ಸ್ವಪ್ನಂಗಳ್" ಎಂದು ಕರೆಯಲಾಗಿದೆ.

ಜೈ ಹಿಂದ್

ಜೈ ಭಾರತ ಮಾತೆ.

**ಪರಾಮರ್ಶನ ಗ್ರಂಥಗಳು**


1. ಕನ್ನಡ ಸಾಹಿತ್ಯ ಈ ಶತಮಾನದ ನೋಟ. ಶಿವರಾಮಕಾರಂತ, ಸಂಪಾದನೆ: ಟಿ.ಪಿಅಶೋಕ
2. ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ: ಕರ್ನಾಟಕ ಸಂಘ ಪುತ್ತೂರು
3. ಕಣ್ಣಲ್ಲಿ ಕಂಡ ಕಾರಂತ: ಪುಟ: 1,2
4. ಅಂತರ್ಜಾಲದಿಂದ ಮಾಹಿತಿಯನ್ನು ಪಡೆಯಲಾಗಿದೆ.
5. https:// kannadasahityaparishattu.in
6. https://Kannada.pratilipi.com:story
7. https://kn.m.Wikipedia.org
8. https://nilume.net
9. https://kn.quara.com
10. https:www.kannadaloka.in
11. https://sampada.net